ಇಂತಹ ಮನಃಸ್ಥಿತಿ ಬೆಳೆಯುವುದು ಸುಸಂಸ್ಕೃತ ಸಮಾಜದಲ್ಲಿ. ಸ್ವಾರ್ಥಬುದ್ಧಿ, ಆಸೆ, ವಂಚನೆ, ಕ್ರೌರ್ಯಗಳು ಅಲ್ಲಿ ಕಡಿಮೆ ಇರುತ್ತವೆ. ಇತರರ ಮೇಲೆ ಸಹಾನುಭೂತಿ ಹೆಚ್ಚಿದಷ್ಟೂ ವ್ಯಕ್ತಿಯಲ್ಲಿ ಶಾಂತಿ, ನೆಮ್ಮದಿ ಹೆಚ್ಚುವುದು. ಜೀವನದ ಹೋರಾಟದಲ್ಲಿ ಎಲ್ಲರೂ ಒಟ್ಟಾಗಿ ಮುನ್ನುಗ್ಗುವರು. ಅನೇಕ ವೇಳೆ ಅದು ಸುಖಕರವಾದ ಹೋರಾಟವಾಗುವುದು. ವಿಜಯದಲ್ಲಿ ಎಲ್ಲರೂ ಸಮಭಾಗಿಯಾಗುವರು. ಬಿಕ್ಕಟ್ಟು ಕಡಿಮೆಯಾಗುವುದು. ಇಲ್ಲಿ ಒಂದಂಶ ಸ್ಪಷ್ಟವಾಗುತ್ತದೆ : ಭೌತಿಕ ಸಂಘರ್ಷವನ್ನು ಎದುರಿಸುವುದು ಸುಲಭ. ಆಂತರಿಕ ಸಂಘರ್ಷಗಳನ್ನು ಎದುರಿಸುವುದು ಅತ್ಯಂತ ಕಷ್ಟ. ಮಾನವನ ಒಗ್ಗಟ್ಟು, ಸಹಬಾಳ್ವೆ, ಒಟ್ಟಾಗಿ ಎದುರಿಸುವ ಪ್ರಯತ್ನ ಇವು ಎಂಥ ಆಪತ್ತನ್ನೂ ಮೀರಿ ನಿಲ್ಲುವ ಶಕ್ತಿಯನ್ನು ನೀಡುವುದು. ಆದರೆ ಸ್ವಾರ್ಥ, ಅಹಂಕಾರ, ವಂಚನೆ ಮುಂತಾದ ಆಂತರಿಕ ಗೊಂದಲಗಳು ತಂದೊಡ್ಡುವ ಬಿಕ್ಕಟ್ಟುಗಳನ್ನು ಪರಿಹರಿಸಲು ಅನೇಕ ಬಾರಿ ಸಮಷ್ಟಿ ಪ್ರಯತ್ನವೇ ವಿಫಲವಾಗುವುದು. ಎರಡು ಜನಾಂಗಗಳ, ದೇಶಗಳ ನಡುವೆ ಬಿಕ್ಕಟ್ಟು ಉಂಟಾದಾಗ ಅದನ್ನು ಪರಿಹರಿಸುವುದು ಕಷ್ಟ, ಏಕೆಂದರೆ ಸಮಸ್ಯೆ ಸೂಕ್ಷ್ಮವಾಗಿರುತ್ತದೆ, ಸಂಕೀರ್ಣವಾಗಿರುತ್ತದೆ. ಇಂಥ ಸನ್ನಿವೇಶದಲ್ಲೇ ಸಾಮರಸ್ಯ, ಸಮನ್ವಯದ ಅಗತ್ಯ ಎಲ್ಲಕ್ಕಿಂತ ಹೆಚ್ಚಾಗಿ ಇರುತ್ತದೆ. ಇದು ವಿಫಲವಾದರೆ ಯುದ್ಧ, ಪೈಪೋಟಿ, ವಿನಾಶಗಳು ಅನಿವಾರ್ಯ.

## ಆಧ್ಯಾತ್ಮಿಕ ದೃಷ್ಟಿ

ಮಾನವನ ವಿಕಾಸದ ಹಂತದಲ್ಲಿ ಭೌತಿಕ, ಮಾನಸಿಕ, ಬೌದ್ಧಿಕ ಹಂತಗಳನ್ನು ದಾಟಿದ ಬಳಿಕ ಉಂಟಾಗುವ ಬೆಳವಣಿಗೆಯೇ ಆಧ್ಯಾತ್ಮಿಕ ವಿಕಾಸ. ಭೌತಿಕ ಜಗತ್ತಿನ ನೆಲೆಯಾಚೆಗೆ ಇರುವ ಅಸ್ತಿತ್ವವನ್ನು ಮಾನವನು ಕಂಡುಕೊಂಡಿರುವುದು ಹಲವು ಸಂಸ್ಕೃತಿಗಳಲ್ಲಿ ಕಂಡುಬರುತ್ತದೆ. ಅದು ಅವತಾರ, ಪ್ರವಾದಿ, ಮಹಾತ್ಮರನ್ನು ಕೇಂದ್ರಿತವಾದ ಧರ್ಮಗಳ ರೂಪದಲ್ಲಿರಲಿ, ತಾತ್ತ್ವಿಕ-ಅನುಭವ ಕೇಂದ್ರಿತ ಧರ್ಮಗಳ ರೂಪದಲ್ಲಿರಲಿ — ಭೌತಿಕ ಜಗತ್ತನ್ನು ಮೀರಿದ ಅಸ್ತಿತ್ವ ಅಲ್ಲಿ ಸ್ವೀಕೃತವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಎಲ್ಲ ಧರ್ಮಗಳ ಮೂಲದಲ್ಲಿ ಶಾಂತಿ, ಸಹಬಾಳ್ವೆ, ನೆಮ್ಮದಿ, ಸಮನ್ವಯಗಳು ಅವುಗಳ ಅವಿಭಾಜ್ಯವಾದ ಅಂಗಗಳೇ ಆಗಿರುತ್ತವೆ.

ಹಾಗಿದ್ದರೆ ಧರ್ಮದ ಹೆಸರಿನಲ್ಲಿ ಇಷ್ಟೊಂದು ಅನಾಚಾರ, ಸಂಘರ್ಷ, ಯುದ್ಧಗಳೆಲ್ಲ ನಡೆದಿವೆಯಲ್ಲ? — ಈ ಪ್ರಶ್ನೆಗೆ ಉತ್ತರ ಇಷ್ಟೆ : ಅದು ಧರ್ಮದ ತಿರುಳಿನಿಂದ ಬಂದ ಪ್ರೇರಣೆಗಳಲ್ಲ, ಧರ್ಮದ ಹೆಸರಿನಲ್ಲಿ ಸ್ವಹಿತಾಸಕ್ತಿಯ ಜನರು ತಮ್ಮ ಬೇಳೆ ಬೇಯಿಸಿಕೊಂಡರು, ಅಷ್ಟೆ. ಅವರು ಶ್ರೇಷ್ಠ ಧಾರ್ಮಿಕ, ತಾತ್ತ್ವಿಕ ಸಂಗತಿಗಳನ್ನು ತಮ್ಮ ಹಿತಾಸಕ್ತಿಗಳ ಪೂರೈಕೆಗಾಗಿ ಬಳಸಿಕೊಂಡರು; ಧರ್ಮದ ತಿರುಳು ಕೆಲವೇ ಮಂದಿ ಸಾಧಕರಲ್ಲಿ ಅದೃಶ್ಯವಾಗಿ ಉಳಿಯಿತು.

## ಗೀತೆಯ ಮಾರ್ಗ

ಹಾಗಿದ್ದರೆ ಸಂಘರ್ಷಗಳಿಗೆ ಆಧ್ಯಾತ್ಮಿಕ ಪರಿಹಾರ ಸಾಧ್ಯವಿಲ್ಲವೆ? – ಖಂಡಿತ ಸಾಧ್ಯವಿದೆ. ಇದಕ್ಕೆ ಅತ್ಯುತ್ತಮ ಮಾರ್ಗ ಕಂಡುಬರುವುದು ಭಗವದ್ಗೀತೆಯಲ್ಲಿ. ಘೋರ ಯುದ್ಧದಂತಹ ಸನ್ನಿವೇಶ; ಅಲ್ಲಿ ಎತ್ತಿರುವ ಪ್ರಶ್ನೆಗಳೂ ಅತ್ಯಂತ ಗಂಭೀರ: ಸಾವು, ನೋವು, ಧರ್ಮ, ವಂಚನೆ, ಶಾಂತಿ ಮುಂತಾದುವು. ಗೀತೆಯಲ್ಲಿ ಹೇಳಿರುವ ಹತ್ತಾರು ವಿಚಾರಗಳು ಒಂದಲ್ಲ ಒಂದು ರೀತಿ ನಮಗೆ ಸಮಸ್ಯೆ, ಗೊಂದಲ, ಬಿಕ್ಕಟ್ಟುಗಳನ್ನು ಸೂಕ್ತವಾಗಿ ಎದುರಿಸಿ ಜೀವನದಲ್ಲಿ ಮುಂದುವರಿಯಲು ದಾರಿ ತೋರಿಸುತ್ತವೆ.


ಆತ್ಮಭಾವ, ಅನಾಸಕ್ತಿ, ಕರ್ಮದಲ್ಲಿ ಕುಶಲತೆ, ಮನೋನಿಗ್ರಹ, ಪರಮಾತ್ಮನಲ್ಲಿ ಶರಣಾಗತಿ, ಸರ್ವಸಮಭಾವ, ಯಜ್ಞದೃಷ್ಟಿಯಿಂದ ಜೀವಿಸುವುದು, ಪರಸ್ಪರ ಸಹಬಾಳ್ವೆ – ಮುಂತಾದ ತತ್ತ್ವಗಳು ವ್ಯಕ್ತಿಜೀವನದಲ್ಲೂ ಸಾಮಾಜಿಕ ಬದುಕಿನಲ್ಲೂ ಅತ್ಯಂತ ಮಹತ್ತ್ವದ್ದಾಗಿವೆ. ಸಮಸ್ತ ಮಾನವನ, ಅಷ್ಟೇಕೆ ಇಡೀ ಸೃಷ್ಟಿಯ ಏಕತೆ, ಸುಖ, ಶಾಂತಿ, ನೆಮ್ಮದಿಗಳನ್ನು ಆದರ್ಶವಾಗಿ ಕಾಣುವ ನಮ್ಮ ಸನಾತನ ಆದರ್ಶಗಳು ಬದುಕಿನ ಎಲ್ಲ ಸಂಘರ್ಷಗಳನ್ನೂ ದಾಟಿ ಹೋಗುವ ವಿಧಾನವನ್ನು ತಿಳಿಸಿಕೊಡುತ್ತವೆ.

ಈ ಹಿನ್ನೆಲೆಯಲ್ಲಿ ಸ್ವಾಮಿ ವಿವೇಕಾನಂದರ ಮಾತುಗಳು ಗಮನಾರ್ಹ : ‘‘ಮಾನವನು ಎಲ್ಲಿಯವರೆಗೆ ಬಾಹ್ಯ ಮತ್ತು ಆಂತರಿಕ ಪ್ರಕೃತಿಯನ್ನು ಮೀರಿ ಹೋಗಲು ಹೋರಾಡುತ್ತಿರುವನೋ ಅಲ್ಲಿಯವರೆಗೆ ಅವನು ಮಾನವ. ನಮ್ಮ ದೇಹದ ಒಳಗೆ ಮತ್ತು ಹೊರಗೆ ಇರುವ ವಸ್ತುವಿಗೆ ಮಾತ್ರ ಈ ನಿಯಮ ಅನ್ವಯಿಸುವುದಲ್ಲ. ನಮ್ಮಲ್ಲಿರುವ ಅತಿ ಸೂಕ್ಷ್ಮ ಸ್ವಭಾವಕ್ಕೂ ಇದು ಅನ್ವಯಿಸುತ್ತದೆ. ನಿಜವಾಗಿ ಇದೇ ಬಾಹ್ಯ ಜಗತ್ತಿನ ಚಾಲಕ ಶಕ್ತಿ. ಬಾಹ್ಯ ಜಗತ್ತನ್ನು ಗೆಲ್ಲುವುದು ಒಳ್ಳೆಯದು, ಮಹತ್ತರವಾದುದೇನೋ ನಿಜ. ಆದರೆ ಇದಕ್ಕೂ ಮಹತ್ತರವಾಗದುದು ನಮ್ಮ ಆಂತರಿಕ ಪ್ರಕೃತಿಯನ್ನು ಗೆಲ್ಲುವುದು. ನಕ್ಷತ್ರಗಳನ್ನು ಮತ್ತು ಗ್ರಹಾವಳಿಗಳನ್ನು ಆಳುತ್ತಿರುವ ನಿಯಮಗಳನ್ನು ತಿಳಿಯುವುದೇನೋ ಒಳ್ಳೆಯದು, ಮಹತ್ತರವಾದುದು. ಆದರೆ ಮಾನವನ ಕಾಮಕ್ರೋಧಾದಿಗಳನ್ನು, ಭಾವನೆ, ಇಚ್ಛಾಶಕ್ತಿಗಳನ್ನು ಆಳುವ ನಿಯಮಾವಳಿಗಳನ್ನು ತಿಳಿದುಕೊಳ್ಳುವುದು ಅದಕ್ಕಿಂತ ಶ್ರೇಷ್ಠವಾದುದು, ಮೇಲಾದುದು. ಆಂತರಿಕ ಮನವನ್ನು ಗೆಲ್ಲುವುದು, ಮಾನವನ ಅಂತರಾಳದಲ್ಲಿ ಕೆಲಸ ಮಾಡುತ್ತಿರುವ ಸೂಕ್ಷ್ಮ ವಿಷಯಗಳನ್ನು ಮತ್ತು ಅವುಗಳ ಅದ್ಭುತ ರಹಸ್ಯಗಳನ್ನು ತಿಳಿದುಕೊಳ್ಳುವುದು ಧರ್ಮಕ್ಕೆ ಮಾತ್ರ ಮೀಸಲಾದದ್ದು.’’ ❋

### ಜುಲೈ ತಿಂಗಳ ಕಾರ್ಯಕ್ರಮಗಳು

| | | |
|---|---|---|
| ೨ | ಮಂಗಳವಾರ | ಏಕಾದಶಿ |
| ೧೭ | ಬುಧವಾರ | ಏಕಾದಶಿ |
| ೨೧ | ಭಾನುವಾರ | ಗುರುಪೂರ್ಣಿಮಾ |
| ೩೧ | ಬುಧವಾರ | ಏಕಾದಶಿ |

# ಗುರುಮಹಿಮೆ



✻ ಯಾರ ಮುಖಾಂತರ ಆತ ಲೋಕ ಶಿಕ್ಷಣ ಮಾಡಬೇಕಾಗಿದೆಯೊ ಅವರಿಗೆ ಸಂಸಾರ ತ್ಯಾಗದ ಆವಶ್ಯಕತೆ. ಆಚಾರ್ಯ ಲೋಕಶಿಕ್ಷಕ; ಆದ್ದರಿಂದ ಆತ ಕಾಮಕಾಂಚನತ್ಯಾಗಿಯಾಗುವುದರ ಆವಶ್ಯಕತೆಯಿದೆ. ಇಲ್ಲದಿದ್ದರೆ ಆತನ ಉಪದೇಶ ಬೇರು ಬಿಡದು. ಬರಿಯ ಆಂತರಿಕ ತ್ಯಾಗವೆ ಸಾಕಾಗದು, ಬಾಹ್ಯತ್ಯಾಗವೂ ಬೇಕೇ ಬೇಕು. ಆಗ ಮಾತ್ರ ಸರಿಯಾಗಿ ಲೋಕಶಿಕ್ಷಣ ನಡೆಯುತ್ತದೆ. ಹಾಗಿಲ್ಲದೆ ಇದ್ದರೆ ಜನರು 'ಈತ ಕಾಮಕಾಂಚನವನ್ನು ತ್ಯಾಗಮಾಡಬೇಕೆಂದು ನಮಗೆ ಬೋಧಿಸುತ್ತಿದ್ದರೂ, ತಾನು ಮಾತ್ರ ಅವನ್ನು ಭೋಗಿಸುತ್ತಿದ್ದಾನೆ' ಎಂದು ಯೋಚಿಸುತ್ತಾರೆ.

✻ ಗುರುವಾಕ್ಯದಲ್ಲಿ ಶ್ರದ್ಧೆ ಇಡುವುದು ಉಚಿತ. ಗುರುವಿನ ಚಾರಿತ್ರ್ಯದ ಕಡೆ ಗಮನಕೊಡಬೇಕಾಗಿಲ್ಲ. 'ನನ್ನ ಗುರು ಹೆಂಡದಂಗಡಿಗೆ ಹೋಗುತ್ತಿದ್ದರೂ, ಆತ ನಿತ್ಯಾನಂದರಾಯ.'

✻ ಗುರುವಾಕ್ಯದಲ್ಲಿ ವಿಶ್ವಾಸವಿಡಬೇಕು. ಗುರುವೇ ಸಚ್ಚಿದಾನಂದ, ಸಚ್ಚಿದಾನಂದನೇ ಗುರು, ಆತನ ಮಾತಿನಲ್ಲಿ ವಿಶ್ವಾಸವಿಟ್ಟರೆ, — ಬಾಲಕನ ಹಾಗೆ ವಿಶ್ವಾಸವಿಟ್ಟರೆ, — ಭಗವಂತ ದೊರೆತುಬಿಡುತ್ತಾನೆ. ಬಾಲಕನದು ಎಂಥ ವಿಶ್ವಾಸ! ಒಬ್ಬನನ್ನು ತೋರಿಸಿ ತಾಯಿ ಮಗುವಿಗೆ ಹೇಳಿದರೆ, 'ಆತ ನಿನ್ನ ಅಣ್ಣನಾಗಬೇಕು' ಅಂತ, ಒಡನೆಯೇ ಅದು ನಂಬುತ್ತದೆ. ಆತ ತನ್ನ ಅಣ್ಣ ಅಂತ. ಆತ ಬ್ರಾಹ್ಮಣನಾಗಿದ್ದರೂ ಸರಿಯೆ ಅಥವಾ ಕಮ್ಮಾರನಾಗಿದ್ದರೂ ಸರಿಯೇ, ತಾಯಿ ಮಾತಿನಲ್ಲಿ ಅದಕ್ಕೆ ನೂರಕ್ಕೆ ನೂರಿಪ್ಪತ್ತೈದು ಭಾಗ ವಿಶ್ವಾಸ. ತಾಯಿ ಹೇಳಿದರೆ, 'ಆ ಕೊಠಡಿಯಲ್ಲಿ ಗೊಗ್ಗಯ್ಯನಿದ್ದಾನೆ' ಅಂತ. ಅಲ್ಲಿ ಗೊಗ್ಗಯ್ಯನಿದ್ದಾನೆ ಅಂತ ಮಗು ಸಂಪೂರ್ಣವಾಗಿ ನಂಬಿಬಿಡುತ್ತದೆ. ಬಾಲಕನ ವಿಶ್ವಾಸ ಅನ್ನುವುದು ಇದೇ. ಗುರುವಾಕ್ಯದಲ್ಲಿ ಇಂಥ ವಿಶ್ವಾಸ ಬೇಕು. ಕಪಟಿಯ, ಲೆಕ್ಕಾಚಾರದ, ವಿಚಾರದ ಬುದ್ಧಿಯಿಂದ ಭಗವಂತನನ್ನು ಪಡೆಯಲಾಗುವುದಿಲ್ಲ. ಶ್ರದ್ಧಾವಂತನಾಗಿಯೂ ಸರಳನಾಗಿಯೂ ಆಗಬೇಕು; ಕಪಟಿಯಾದರೆ ಆಗದು. ಸರಳನಿಗೆ ಭಗವಂತ ಬಹಳ ಸಹಜವಾಗಿ ದೊರೆತುಬಿಡುತ್ತಾನೆ; ಆದರೆ ಕಪಟಿಯಿಂದ ಆತ ಬಹಳ ದೂರದಲ್ಲೇ ಇರುತ್ತಾನೆ.

✻ ಒಬ್ಬ ಶಿಷ್ಯ ಗುರುವನ್ನು ಕೇಳಿದ, 'ಪೂಜ್ಯರೆ, ದಯವಿಟ್ಟು ಹೇಳಿ, ಭಗವಂತನನ್ನು ಪಡೆಯುವುದು ಹೇಗೆ?' ಗುರು ಹೇಳಿದ, 'ಬಾ ನನ್ನೊಡನೆ, ನಿನಗೆ ತೋರಿಸಿಕೊಡುತ್ತೇನೆ.' ಹೀಗೆಂದು ಹೇಳಿ ಗುರು ಆತನನ್ನು ಸಂಗಡ ಕರೆದುಕೊಂಡು ಒಂದು ಕೆರೆಯ ಹತ್ತಿರಕ್ಕೆ ಹೋದ. ಇಬ್ಬರೂ ನೀರಿಗೆ ಇಳಿದರು. ಬಳಿಕ ಗುರು ಇದ್ದಕ್ಕಿದ್ದ ಹಾಗೆ ಶಿಷ್ಯನನ್ನು ನೀರಿನೊಳಕ್ಕೆ ಮುಳುಗಿಸಿ ಅದುಮಿ ಹಿಡಿದ. ಒಂದು ಸ್ವಲ್ಪ ಹೊತ್ತಿನ ನಂತರ ಆತನನ್ನು ಬಿಟ್ಟುಬಿಡಲಾಗಿ ಶಿಷ್ಯ ನೀರಿನಿಂದ ಮೇಲಕ್ಕೆ ಎದ್ದುಬಂದು ನಿಂತ. ಆಗ ಗುರು ಕೇಳಿದ, 'ನೀರಿನೊಳಗಿದ್ದಾಗ ನಿನಗೇನನಿಸುತ್ತಿತ್ತು?' ಶಿಷ್ಯ ಹೇಳಿದ, 'ಪ್ರಾಣ ಹೋಗುವುದರಲ್ಲಿತ್ತು; ಒಂದು ಗುಟುಕು ಉಸಿರಿಗಾಗಿ ಪ್ರಾಣ ಸುಮ್ಮನೆ ಒದ್ದಾಡುತ್ತಿತ್ತು.' ಆಗ ಗುರು ಹೇಳಿದ: 'ಯಾವಾಗ ನಿನ್ನ ಪ್ರಾಣ ಈ ರೀತಿ ಭಗವಂತನಿಗಾಗಿ ವ್ಯಾಕುಲಪಡುವುದೊ ಆಗ ತಿಳಿದುಕೊ ನೀನು ಹೆಚ್ಚು ಕಾಲ ಆತನ ದರ್ಶನಕ್ಕಾಗಿ ಕಾಯಬೇಕಾಗಿಲ್ಲ ಅಂತ.'

✻ ಪರಮಹಂಸರಲ್ಲಿ ಎರಡು ವಿಧ; ಜ್ಞಾನೀ ಪರಮಹಂಸ, ಪ್ರೇಮೀ ಪರಮಹಂಸ. ಯಾರು ಜ್ಞಾನಿಯೊ ಆತ ಸ್ವಾರ್ಥಪರ — ತನಗಾದರೆ ಸಾಕು ಅನ್ನುತ್ತಾನೆ. ಯಾರು ಪ್ರೇಮಿಯೊ ಆತ ಶುಕದೇವಾದಿಗಳೋಪಾದಿಯಲ್ಲಿ ಭಗವಂತನ ಸಾಕ್ಷಾತ್ಕಾರ ಮಾಡಿಕೊಂಡು ಲೋಕಶಿಕ್ಷಣ ಮಾಡುತ್ತಾನೆ. ಕೆಲವರು ಮಾವಿನ ಹಣ್ಣು ತಿಂದು ಬಾಯನ್ನು ಚೆನ್ನಾಗಿ ಒರೆಸಿಕೊಂಡುಬಿಡುತ್ತಾರೆ; ಇನ್ನು ಕೆಲವರು ಒಂದು ಐದಾರು ಜನಕ್ಕೆ ಕೊಟ್ಟು ತಾವೂ ತಿನ್ನುತ್ತಾರೆ. ಕೆಲವರು ಬಾವಿ ತೋಡಲು ಕುಕ್ಕೆ ಗುದ್ದಲಿ ತೆಗೆದುಕೊಂಡು ಬರುತ್ತಾರೆ; ತೋಡಿದ ನಂತರ ಅವನ್ನು ಹಾಗೆಯೇ ಬಿಸಾಡಿಬಿಡುತ್ತಾರೆ. ಇನ್ನು ಕೆಲವರು ಅಕ್ಕಪಕ್ಕದವರಿಗೆ ಬೇಕಾಗಬಹುದೆಂದು ಒಂದು ಕಡೆ ಇಡುತ್ತಾರೆ. ಶುಕದೇವಾದಿಗಳು ಇತರರಿಗಾಗಿ ಕುಕ್ಕೆ ಗುದ್ದಲಿಯನ್ನು ತೆಗೆದು ಇಟ್ಟಿದ್ದರು.

✻ ಭಗವಂತ ಗುರುವಿನ ರೂಪವನ್ನು ಧರಿಸಿ, ತಾನೇ ಮುಂದೆ ಬಂದು ಜೀವಿಯ ಪಾಶವನ್ನು ಕತ್ತರಿಸಿಹಾಕುವುದಾದರೆ, ಆಗ ಜೀವಿ ಭಯಪಡಬೇಕಾದ್ದೇನಿಲ್ಲ.

✻ ಸಂಸಾರಿಯು ಸದ್ಗುರುವಿನಿಂದ ಉಪದೇಶ ಪಡೆಯಬೇಕು. ಸದ್ಗುರುವಿಗೆ ಲಕ್ಷಣಗಳಿವೆ. ಯಾರು ಕಾಶಿಗೆ ಹೋಗಿ ಅದನ್ನು ಚೆನ್ನಾಗಿ ನೋಡಿ ಬಂದಿರುವರೊ, ಅವರಿಂದ ಕಾಶಿ ವಿಷಯವಾಗಿ ತಿಳಿದುಕೊಳ್ಳಬೇಕು. ಬರೀ ಪುಸ್ತಕಪಾಂಡಿತ್ಯ ಯಾವ ಪ್ರಯೋಜನಕ್ಕೂ ಬಾರದು. ಯಾರಿಗೆ ಈ ಸಂಸಾರ ಅನಿತ್ಯ ಎಂಬ ಬೋಧೆಯಾಗಿಲ್ಲವೊ, ಅಂಥ ಪಂಡಿತನ ಉಪದೇಶ ಸ್ವೀಕರಿಸುವುದು ಯುಕ್ತವಾದುದಲ್ಲ. ಪಂಡಿತನು ವಿವೇಕ-ವೈರಾಗ್ಯ ಸಂಪನ್ನನಾಗಿದ್ದರೆ ತಾನೆ ಆತ ಉಪದೇಶ ಕೊಡಲು ಅರ್ಹನಾಗುತ್ತಾನೆ?

'ಶ್ರೀರಾಮಕೃಷ್ಣ ವಚನವೇದ'ದಿಂದ

# ಶ್ರೀಮಾತೆಯವರ ಮೂರು ಸ್ಮೃತಿಚಿತ್ರಗಳು

## ೧. ಶ್ರೀಮಾತೆಯವರ ಸ್ಮೃತಿ

ಮೂಲ ಬಂಗಾಳಿ : ಬ್ರಹ್ಮಗೋಪಾಲ ದತ್ತ
ಅನುವಾದ : ಸ್ವಾಮಿ ಜ್ಞಾನಯೋಗಾನಂದ

**ಬಾ**ಗ್‌ಬಜಾರಿನ ದತ್ತ ಕುಟುಂಬವು ಶ್ರೀಮಾತೆಯವರೊಂದಿಗೆ ಅತ್ಯಂತ ಆತ್ಮೀಯ ಸಂಬಂಧವನ್ನು ಹೊಂದಿತ್ತು. 'ಲಕ್ಷ್ಮೀ ನಿವಾಸ'ದಲ್ಲಿಯೂ ಶ್ರೀಮಾತೆಯವರು ಎರಡೂವರೆ ತಿಂಗಳ ದೀರ್ಘಕಾಲ ವಾಸವಾಗಿದ್ದರು. ನಮ್ಮ ಕುಟುಂಬದಲ್ಲಿ ಇದ್ದ, ಶ್ರೀಮಾತೆಯವರಿಂದ ದೀಕ್ಷೆ ಪಡೆದಿದ್ದ ಶಿಷ್ಯಂದಿರಲ್ಲೆಲ್ಲ ನನ್ನ ತಂದೆ ಕಿರಣಚಂದ್ರ ದತ್ತ ಅವರು ವಿಶಿಷ್ಟರಾದವರು; ಅವರು ಶ್ರೀಮಾತೆಯವರ ಸೇವಕರೂ ರಸದ್ದಾರರೂ ಆಗಿದ್ದರು. ಕಿರಣಚಂದ್ರ, ಅವರ ಮಗಳು ಶಿವರಾಣಿ ಹಾಗೂ ಅಣ್ಣನ ಮಕ್ಕಳಾದ ಸುಧಾಂಶುಮೋಹನ ಹಾಗೂ ವಿಭೂತಿಭೂಷಣ ಇಬ್ಬರೂ ಶ್ರೀಮಾತೆಯವರಿಂದ ದೀಕ್ಷೆ ಪಡೆದಿದ್ದರು.



ಶ್ರೀಮಾತೆಯವರ ಬಗ್ಗೆ ನನ್ನ ತಿಳಿವಳಿಕೆ ಅಧಿಕ ಭಾಗ ಇತರರಿಂದ ಕೇಳಿದ್ದನ್ನು ಅವಲಂಬಿಸಿದೆ; ಸ್ವಲ್ಪ ಭಾಗ ನನ್ನ ನೆನಪನ್ನು ಅವಲಂಬಿಸಿದ್ದೂ ಇದೆ. ೧೯೦೪ ನೇ ಇಸವಿಯಲ್ಲಿ ಶ್ರೀಮಾತೆಯವರು ಮೊದಲ ಬಾರಿಗೆ ಬಾಗ್‌ಬಜಾರಿನಲ್ಲಿರುವ 'ಲಕ್ಷ್ಮೀ ನಿವಾಸ'ಕ್ಕೆ ಪದಾರ್ಪಣೆ ಮಾಡಿದರು. ಯತೀಂದ್ರನಾಥ ಮಿತ್ರ ಅವರು ವೈಷ್ಣವ ಪದಾವಳಿ ಹಾಡುಗಳನ್ನು ಹಾಡಿದ್ದರು – ಅದನ್ನು ಕೇಳಲು ಶ್ರೀಮಾತೆ ಬಂದಿದ್ದರು. ಆಗ ಶ್ರೀಮಾತೆಯವರೊಂದಿಗೆ ಗೋಲಾಪ್-ಮಾ, ಯೋಗಿನ್-ಮಾ ಹಾಗೂ ಇನ್ನೂ ಕೆಲವು ಮಂದಿ ಭಕ್ತೆಯರು ಇದ್ದರು. 'ಮಾಥುರ್' ಕಥಾನಕವನ್ನು ಕೇಳಿ ಶ್ರೀಮಾತೆಯವರು ಆಳವಾದ ಭಾವಸಮಾಧಿಯಲ್ಲಿ ಮುಳುಗಿದ್ದರು. ಭಾವಾವಿಷ್ಟರಾದ ಶ್ರೀಮಾತೆಯವರ ನಿರ್ದೇಶನದಂತೆ ಗೋಲಾಪ್-ಮಾ ಅವರು, ಗೃಹಸ್ಥರಿಗೆ ಮಂಗಳವುಂಟಾಗುವಂತೆ (ರಾಧಾ-ಕೃಷ್ಣರ) ಮಿಲನದ ಹಾಡನ್ನು ಹಾಡಿ ಆ ಅಧ್ಯಾಯವನ್ನು ಕೊನೆಗೊಳಿಸುವಂತೆ ಹಾಡುಗಾರರನ್ನು ಕೇಳಿಕೊಂಡರು. ಕೀರ್ತನೆ ಮುಗಿದಾಗ ಶ್ರೀಮಾತೆಯವರು ಭಾವಾವೇಶದಿಂದ ಸಂಪೂರ್ಣವಾಗಿ ಪ್ರಜ್ಞಾಹೀನರಾಗಿಬಿಟ್ಟಿದ್ದರು. ಈ ಅವಸ್ಥೆಯಲ್ಲಿದ್ದ ಶ್ರೀಮಾತೆಯವರ ಬಾಯಿಗೆ ಒಂದಿಷ್ಟು ಸಿಹಿ ತಿಂಡಿ ನೀಡಿ, ಅದೇ ಧ್ಯಾನಾವಸ್ಥೆಯಲ್ಲಿ ಅವರನ್ನು ಗೋಲಾಪ್ ಮಾ ಮತ್ತು ಯೋಗಿನ್-ಮಾ ಗಾಡಿಗೆ ಹತ್ತಿಸಿ, ಅವರ ತಾತ್ಕಾಲಿಕ ನಿವಾಸವಾಗಿದ್ದ ಬಾಗ್‌ಬಜಾರ್ ಸ್ಟ್ರೀಟಿನ ೨/೧ನೇ ಮನೆಗೆ ಕರೆದುಕೊಂಡು ಹೋದರು. ಶ್ರೀಮಾತೆಯವರ ಸುದ್ದಿ ತಿಳಿಯಲು ಹೆಚ್ಚುಕಡಿಮೆ ಅವರೊಂದಿಗೇ ಕಿರಣಚಂದ್ರ ಕೂಡಾ ಆ ಮನೆಗೆ ಹೋಗಿದ್ದರು. ಅವರಿಗೆ ಯೋಗಿನ್-ಮಾ ಹೇಳಿದ್ದರು: ''ವೃಂದಾವನದಲ್ಲಿ ಶ್ರೀಮಾತೆಯವರಿಗೆ ಇದೇ ರೀತಿ ಭಾವಸಮಾಧಿಯುಂಟಾಗಿದ್ದುದನ್ನು ನೋಡಿದ್ದೆ. ಇವತ್ತು ಇನ್ನೊಮ್ಮೆ ನೋಡಿದೆ. ಬೇರೆ ಯಾವತ್ತೂ ನೋಡಿಲ್ಲ. ೧೯೦೯ನೇ ಇಸವಿಯಲ್ಲಿ ಆಂದುಲ್ ತಂಡದವರಿಂದ ಕಾಳೀಕೀರ್ತನೆ ನಡೆದಾಗ, ಅದನ್ನು ಕೇಳಲು ಶ್ರೀಮಾತೆಯವರು ಬಂದಿದ್ದರು; ಇದು ಎರಡನೇ ಬಾರಿ. ಮೇಲಂತಸ್ತಿನಲ್ಲಿದ್ದ ದೇವರ ಕೋಣೆಯಲ್ಲಿ ಕುಳಿತು, ಕೆಳಗೆ ಅಂಗಳದಲ್ಲಿ ನಡೆಯುತ್ತಿದ್ದ ಕಾಳೀಕೀರ್ತನೆಯನ್ನು ಕೇಳಿಸಿಕೊಂಡಿದ್ದರು. ಈ ಕುಟುಂಬದ ಇತಿಹಾಸದಲ್ಲೇ – ಎಲ್ಲಕ್ಕಿಂತ ಹೆಚ್ಚು ಆನಂದದ ಘಟನೆ ನಡೆದುದು ಶ್ರೀಮಾತೆಯವರು ಮೂರನೇ ಬಾರಿ ಭೇಟಿ ಕೊಟ್ಟಾಗ – ೧೯೧೨ರ ಮಾರ್ಚ್ ೨೬ ಮಂಗಳವಾರದಂದು, ಶ್ರೀಅನ್ನಪೂರ್ಣಾ ಪೂಜೆಯ ಸಂದರ್ಭದಲ್ಲಿ. ಅಂದು ಮೇಲಂತಸ್ತಿನ ದೇವರಕೋಣೆಯಲ್ಲಿ ಅವರು